**ದಿನಾಂಕಃ 13.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ನಾನು ತಿಪ್ಪಾಪುರ ರಸ್ತೆ ವೀರಭದ್ರನ ಪಾಳ್ಯದಲ್ಲಿ ವಾಸಿಸುತ್ತಿದ್ದೇನೆ. ನಾನು ನಿವೃತ್ತ ಸರ್ಕಾರಿ ನೌಕರ. ನಾನು ನಿವೃತ್ತಿ ಹೊಂದಿ 14 ವರ್ಷ ಆಗಿರುತ್ತದೆ. ನಾನು ಬಹಳಷ್ಟು ಸಹ ಮನೆಯಲ್ಲಿಯೇ ಕಳೆಯುತ್ತೇನೆ ಎಂದರೆ ಸರಿ. ದಿಃ 25.02.2019 ಮತ್ತು 08.03.2019 ರಲ್ಲಿ ವಾದಿ ಮತ್ತು ಪ್ರತಿವಾದಿಯವರ ನಡುವೆ ಜಾಗದ ಕುರಿತು ಮಾತುಕತೆ ಆಗಿರುತ್ತದೆ ಎಂದರೆ ಸರಿ. ವಾದಿಯು ಅವರ ಸ್ವತ್ತಿನಲ್ಲಿ ಪಾಯ ಹಾಕಲು ಹೋದಾಗ 1 ನೇ ಪ್ರತಿವಾದಿಯು ಬಂದು ಅಡ್ಡಪಡಿಸಿರುತ್ತಾರೆ ಎಂದರೆ ಸರಿ. ಗಲಾಟೆಯನ್ನು ದೂರದಿಂದ ನೋಡಿರುತ್ತೇನೆ. ನಾನು ಕಟ್ಟಿಸಿದ ಮನೆ ಸರ್ವೆ ನಂ. 50/2 ರಲ್ಲಿ ಇರುತ್ತದೆ ಎಂದರೆ ಸರಿ. ಮೂಲತಃ ಸದರಿ ಆಸ್ತಿಯು ಚಕ್ರಪಾಣಿಯವರಿಗೆ ಸೇರಿದ್ದು ಎಂದರೆ ಸರಿ. 50/2 ರ ಉತ್ತರಕ್ಕೆ ಸರ್ವೇ ನಂ. 50/1 ಪ್ರಾರಂಭವಾಗುತ್ತದೆ ಎಂದರೆ ಸರಿ. 50/2 ರ ಉತ್ತರದ ತುದಿಯಲ್ಲಿ ಸರ್ವೇ ನಂ. 50/1 ರಲ್ಲಿರುವ ವಾದಿಯ ಆಸ್ತಿ ಇರುತ್ತದೆ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಜಗಳವಾಗಿರುವ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಚಾಂದ್ ಪಾಷಾರವರು ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ನಾನು ಮಧ್ಯಸ್ಥಿಕೆವಹಿಸಿರುವುದಿಲ್ಲ. ಅವರು ಆಸ್ತಿಯನ್ನು ಖರೀದಿಸುವಾಗ ನನ್ನನ್ನು ಕರೆಯಿಸಿ ಅಳತೆ ಮಾಡಿಸಿರುವುದಿಲ್ಲ. ಖರೀದಿ ಮಾಡಿರುವ ವಿಷಯ ಗೊತ್ತಿರುತ್ತದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿಯ ಆಸ್ತಿಯು 93 X 50 ಅಡಿ ಇರುತ್ತದೆ ಎಂದು ಬರೆಸಿರುವುದಿಲ್ಲ. 1 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಾಯದ ವಿಷಯದ ಕುರಿತು ವಾದಿ ಮತ್ತು ಪ್ರತಿವಾದಿಯರಿಗೆ ಜಗಳವಾಗಿರುತ್ತದೆ ಎಂದರೆ ಸರಿ. ವಾದಿಯು ಅವರ ಜಾಗದಲ್ಲಿ ಪಾಯ ಹಾಕುವ ಸಮಯದಲ್ಲಿ ಆಗಿರುವ ಜಗಳವೆಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ಇಲ್ಲ**

**ಮರು ವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**